# ‘ಆ್ಯಪಲ್’ನಲ್ಲಿ ಕನ್ನಡಕ್ಕೆ ಆದ್ಯತೆ



ಆ್ಯಪಲ್ ಕಂಪನಿಯು ‘ಐಒಎಸ್ 18’ ಬಿಡುಗಡೆ ಮಾಡುವ ತುಡಿತದಲ್ಲಿದ್ದು, ಈ ಕಾರ್ಯಾಚರಣಾ ಆವೃತ್ತಿಯಲ್ಲಿ ಕನ್ನಡಕ್ಕೆ ಆದ್ಯತೆ ನೀಡಿರುವುದು ಗಮನಾರ್ಹ.

■ ಶಶಿಕುಮಾರ್ ಸಿ.

ಆ್ಯಪಲ್ ಕಂಪನಿಯು ತನ್ನ ಬಹು ನಿರೀಕ್ಷಿತ ‘ಐಒಎಸ್ 18’ಗೆ (ಐಫೋನ್ ಕಾರ್ಯಾಚರಣಾ ವ್ಯವಸ್ಥೆ) ಅಂತಿಮ ರೂಪ ನೀಡಿದ್ದು, ಬಿಡುಗಡೆಗೆ ಸಜ್ಜಾಗುತ್ತಿದೆ. ಹೊಸ ಆವೃತ್ತಿಯಲ್ಲಿ ಭಾರತೀಯ ಮಾರುಕಟ್ಟೆಗೆ ಅನುಗುಣವಾಗಿ ಪ್ರಾದೇಶಿಕ ಭಾಷಾ ಅಸ್ಮಿತೆಗೆ ತಕ್ಕಂತೆ ಕೆಲ ಮಹತ್ತರ ಬದಲಾವಣೆಗಳನ್ನು ಒದಗಿಸಲಿದ್ದು, ಕನ್ನಡಕ್ಕೆ ಹಿಂದೆಂದಿಗಿಂತಲೂ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಸಾಮರ್ಥ್ಯ ದೃಷ್ಟಿಯಿಂದ ನೋಡುವುದಾದರೆ ಈ ಆವೃತ್ತಿಯು ಸಹಜವಾಗಿ ಹಿಂದಿನ ಆವೃತ್ತಿಗಿಂತಲೂ ಹೆಚ್ಚು ಸಮರ್ಥವಾಗಿದೆ. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವನ್ನು ಕೇಂದ್ರಬಿಂದುವಾಗಿಟ್ಟುಕೊಂಡು ರೂಪಿಸಿರುವ ಈ ಆವೃತ್ತಿಯಲ್ಲಿ ಹಲವಾರು ಕಸ್ಟಮೈಸ್ಡ್ ಆಯ್ಕೆಗಳನ್ನು ಒದಗಿಸಲಾಗಿದೆ. ಜೊತೆಗೆ ಆ್ಯಪಲ್‌ನ ಫೋಟೊ ಅಪ್ಲಿಕೇಷನ್ ಅನ್ನು ಮರುವಿನ್ಯಾಸ ಮಾಡಲಾಗಿದ್ದು, ಹಿಂದಿಗಿಂತಲೂ ಹೆಚ್ಚು ಆಕರ್ಷಕವಾಗಿ ಕಾಣುವಂತೆ ಬದಲಿಸಲಾಗಿದೆ. ಮೇಲ್‌ನಲ್ಲಿ ಇನ್‌ಬಾಕ್ಸ್ ನಿರ್ವಹಿಸಲು ಬಳಕೆದಾರರಿಗೆ ಹೊಸ ಆಯ್ಕೆಗಳನ್ನು ಕಲ್ಪಿಸಲಾಗಿದೆ.

ದೇಶದ ಪ್ರಾದೇಶಿಕವಾರು ಭಾಷೆಗಳಿಗೆ ಆದ್ಯತೆ ನೀಡಿದ ಸಲುವಾಗಿ ಬಹುಭಾಷಾ ಕೀಬೋರ್ಡ್, ಭಾಷಾ ಹುಡುಕಾಟ ಮತ್ತು ಬಹುಭಾಷಾ ಸಿರಿ ನೆರವಿನೊಂದಿಗೆ ಸಂಪೂರ್ಣ ಮರುವಿನ್ಯಾಸ ಮಾಡಲಾಗಿದೆ.

## ಭಾಷೆಗಳ ಕಸ್ಟಮೈಸ್

ಆ್ಯಪಲ್ ಬಳಕೆದಾರರು ಹೊಸ ಆವೃತ್ತಿಯಲ್ಲಿ, ದೇಶದಲ್ಲಿ ಮಾತನಾಡುವ ವಿವಿಧ ಭಾಷೆಗಳ ಭಾರತೀಯ ಅಂಕಿಗಳೊಂದಿಗೆ ಲಾಕ್‌ಸ್ಕ್ರೀನ್ ಹಾಗೂ ಸಮಯವನ್ನು ಕಸ್ಟಮೈಸ್ ಮಾಡಬಹುದು. ಕನ್ನಡ, ಮಲೆಯಾಳಂ, ಒಡಿಯಾ, ತೆಲುಗು, ಅರೇಬಿಕ್, ಅರೇಬಿಕ್ ಇಂಡಿಕ್, ಬಾಂಗ್ಲಾ, ದೇವನಾಗರಿ, ಗುಜರಾತಿ, ಗುರುಮುಖಿ ಭಾಷೆಗಳಲ್ಲೇ ಲಾಕ್ ಸ್ಕ್ರೀನ್ ಕಸ್ಟಮೈಸ್ ಮಾಡಬಹುದಾಗಿದೆ.

ಅಲ್ಲದೆ, ಲೈವ್ ವಾಯ್ಸ್ ಮೇಲ್ ಟ್ರಾನ್ಸ್‌ಸ್ಕ್ರಿಪ್ಷನ್ ಎಂಬ ಹೊಸ ಆಯ್ಕೆ ಪರಿಚಯಿಸಿದ್ದು, ಇದನ್ನು ಇಂಗ್ಲಿಷ್‌ನಲ್ಲಿ ವ್ಯವಹರಿಸಬೇಕಾಗುತ್ತದೆ. ಲೈವ್ ಕಾಲರ್ ಐಡಿ, ಸ್ಮಾರ್ಟ್ ಕರೆ, ಇತಿಹಾಸ ಹುಡುಕಾಟ ಮತ್ತು ಹೊಸ ಫೋನ್ ಕೀಪ್ಯಾಡ್ ಹುಡುಕಾಟ ಮತ್ತು ಸ್ಪೀಡ್ ಡಯಲಿಂಗ್ ಅನ್ನೂ ಇದರಲ್ಲಿ ಮಾಡಬಹುದು.

## ಬಹುಭಾಷಾ ಕೀಬೋರ್ಡ್

ಬಹುಭಾಷಾ ಕೀಬೋರ್ಡ್ ಕ್ವಿಕ್‌ಪಾತ್ ಮತ್ತು ಎಮೋಜಿ ಪ್ರಿಡಿಕ್ಷನ್ ಆಯ್ಕೆಗಳು ಇದರಲ್ಲಿ ಹೊಸತಾಗಿದ್ದು, ಹೆಚ್ಚುವರಿ ಭಾಷಾ ಸ್ಕ್ರಿಪ್ಟ್‌ಗಳು ಪರದೆಯ ಎಡ ಮತ್ತು ಬಲಭಾಗದಲ್ಲಿ ಕಾಣಿಸಿಕೊಳ್ಳಲಿವೆ. ಬಳಕೆದಾರರು ಮನಬಂದಂತೆ ಇವುಗಳನ್ನು ಬದಲಿಸಲು ನೆರವಾಗಲಿವೆ. ಬಹು ಭಾಷಾ ಕೀಬೋರ್ಡ್ ಬಳಕೆದಾರರ ಹಿಂದಿನ ಸಂಭಾಷಣೆ ನೆನಪಿನಲ್ಲಿಟ್ಟುಕೊಂಡು ಟೈಪಿಸುವಾಗ ಪರದೆಯಲ್ಲಿ ಪೂರಕ ನೆರವು ನೀಡುತ್ತದೆ. ಟೈಪ್ ಮಾಡಿದಂತೆಲ್ಲಾ ಅಕ್ಷರ ದೋಷವಿದ್ದರೆ ಅದನ್ನು ಸ್ವಯಂಚಾಲಿತವಾಗಿ ಸರಿಪಡಿಸುತ್ತದೆ. ಇದು, ಇಂಗ್ಲಿಷ್, ಬಾಂಗ್ಲಾ, ಗುಜರಾತಿ, ಹಿಂದಿ, ಮರಾಠಿ, ಪಂಜಾಬಿ, ತಮಿಳು, ತೆಲುಗು ಹಾಗೂ ಕನ್ನಡ ಭಾಷೆಗಳಲ್ಲಿ ಲಭ್ಯ.



## ಕನ್ನಡ ಕೀಬೋರ್ಡ್ ಲೇಔಟ್

ಕನ್ನಡಕ್ಕೆ ಸಂಬಂಧಿಸಿದಂತೆ ಇದು ಐಫೋನ್‌ನಲ್ಲಿನ ಮಹತ್ವದ ಬದಲಾವಣೆ. ಕನ್ನಡ ಸೇರಿದಂತೆ 11 ಭಾರತೀಯ ಭಾಷೆಗಳ ವರ್ಣಮಾಲೆಯ ವಿನ್ಯಾಸಗಳಿಗೆ ಪೂರಕವಾಗಿ ಸ್ಪಂದಿಸಿ ಸರಾಗವಾಗಿ ಕಾರ್ಯನಿರ್ವಹಿಸಲು ನೆರವಾಗುತ್ತದೆ. ಇದರಿಂದ ಭಾರತೀಯ ಲಿಪಿಗಳಾದ ಕನ್ನಡ, ಹಿಂದಿ, ಬಾಂಗ್ಲಾ, ಗುಜರಾತಿ, ಮಲೆಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳನ್ನು ನೇರವಾಗಿ ಐಫೋನ್‌ನಲ್ಲಿ ಟೈಪ್ ಮಾಡಬಹುದು. ಕೀಲಿಗಳನ್ನು ವರ್ಣಮಾಲೆಯ ಕ್ರಮದಲ್ಲಿ ಜೋಡಿಸಲಾಗಿದ್ದು, ಲೇಔಟ್‌ಗಳಲ್ಲಿನ ಸ್ವರ ಮತ್ತು ಸಂಯೋಜಕ ಕೀಗಳು ಬಳಕೆದಾರರು ಟೈಪ್ ಮಾಡುವುದರ ಆಧಾರದ ಮೇಲೆ ಕ್ರಿಯಾತ್ಮಕವಾಗಿ ಬದಲಾಗುತ್ತವೆ ಮತ್ತು ಟೈಪ್ ಮಾಡಲು ಸರಿಯಾದ ಅಕ್ಷರವನ್ನು ಹುಡುಕುವುದು ಇನ್ನಷ್ಟು ಸಲಭ.

## ಕನ್ನಡದಲ್ಲಿ ಸಿರಿಯನ್ನು ಮಾತಾಡಿಸಿ.

‘ಸಿರಿ 9’ ಭಾರತೀಯ ಭಾಷೆಗಳಿಗೆ ಮತ್ತು ಭಾರತದಲ್ಲಿ ಬಳಸುವ ಇಂಗ್ಲಿಷ್ ಭಾಷೆಯೊಂದಿಗೆ ಮುಕ್ತವಾಗಿ ವ್ಯವಹರಿಸುತ್ತದೆ. ಹೊಸ ಆವೃತ್ತಿ ಬಿಡುಗಡೆಗೊಂಡ ಬಳಿಕ ಬಳಕೆದಾರರು ಸಿರಿಯನ್ನು ಸ್ಥಳೀಯ ಭಾಷೆಯೊಂದಿಗೆ ಬೆರೆಸಿದ ಇಂಗ್ಲಿಷ್ ಬಳಸಿ, ಕಾಲ್ ಮಾಡಲು, ಅಲಾರಂ ಸೆಟ್ ಮಾಡಲು ಮತ್ತು ಟೈಮರ್ ಹೊಂದಿಸಲು, ಅಪ್ಲಿಕೇಷನ್ ತೆರೆಯಲು, ಸಂಗೀತ ಪ್ಲೇ ಮಾಡಲು ಅಥವಾ ಹವಾಮಾನ ಪರಿಶೀಲಿಸುವುದು ಸೇರಿದಂತೆ ಇನ್ನಿತರ ವಿಚಾರಗಳ ಬಗ್ಗೆ ಆದೇಶ ನೀಡಬಹುದು, ಮಾಹಿತಿ ಕೋರಬಹುದು.

ಬಳಕೆದಾರರು ಇಂಗ್ಲಿಷ್ ಅನ್ನು ಬೆಂಗಾಲಿ, ಗುಜರಾತಿ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗುಗಳೊಂದಿಗೆ ಮಿಕ್ಸ್ ಮಾಡಿಯೂ ಸಿರಿಯೊಂದಿಗೆ ಸಂಪರ್ಕ ಹೊಂದಬಹುದು. ಉದಾಹರಣೆಗೆ ಹೇ ಸಿರಿ ರೋಹಿತ್‌ಗೆ ಕಾಲ್ ಮಾಡು ಎಂದು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಮಾತನಾಡಿದರೆ, ಅದು ಅವರಿಗೆ ಕರೆ ಮಾಡುತ್ತದೆ. ಪ್ರಸ್ತುತ ಬಳಕೆಯಲ್ಲಿರುವ ಸಿರಿಯು ದೇಶದಲ್ಲಿ ಹಿಂದಿ ಭಾಷೆಯೊಂದಿಗೆ ಮಾತ್ರ ವ್ಯವಹರಿಸುತ್ತದೆ. ■